ಕರ್ನಾಟಕ ಸರ್ಕಾರ

**ಅರಣ್ಯ ಇಲಾಖೆ**

**ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯ ಪಡೆ ಮುಖ್ಯಸ್ಥರು) ಹಾಗೂ ಆಯ್ಕೆ ಪ್ರಾಧಿಕಾರ ರವರ ಕಚೇರಿ, ಅರಣ್ಯ ಭವನ, ಮಲ್ಲೇಶ್ವರಂ, ಬೆಂಗಳೂರು-560003**

# ಪ್ರಕಟಣೆ

**ಅಧಿಸೂಚನೆ ಸಂಖ್ಯೆ: ಬಿ9-ನೇಮಕಾತಿ-ವಿವ-1/2019-20 ದಿನಾಂಕ: 02-03-2020**
**339 ಅರಣ್ಯ ರಕ್ಷಕ ಹುದ್ದೆಗಳಿಗೆ ನೇರ ನೇಮಕಾತಿ**

339 ಅರಣ್ಯ ರಕ್ಷಕ ಹುದ್ದೆಗಳ ನೇರ ನೇಮಕಾತಿ ಸಂಬಂಧ ದಿನಾಂಕ: 07.02.2022 ರಂದು ಅಧಿಸೂಚನೆಯಲ್ಲಿ ಅಧಿಸೂಚಿಸಿರುವ 11 ವೃತ್ತಗಳ ಅರಣ್ಯ ರಕ್ಷಕ ಹುದ್ದೆಗಳಿಗೆ ವೃತ್ತವಾರು ಪ್ರತ್ಯೇಕವಾಗಿ 1:1 (ಹುದ್ದೆ:ಅಭ್ಯರ್ಥಿ) ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಪ್ರಕಟಿಸಲಾಗಿರುತ್ತದೆ. ಈ ಸಂಬಂಧ ದಿನಾಂಕ: 07.02.2022 ರಿಂದ 16.02.2022 ರ ಸಂಜೆ 5.30 ಗಂಟೆಯೊಳಗೆ ಈ ಕಛೇರಿಗೆ ಸ್ವೀಕೃತವಾದ ಆಕ್ಷೇಪಣೆಗಳನ್ನು ಕೂಲಂಕಶವಾಗಿ ಪರಿಶೀಲಿಸಿ, ಇಲಾಖೆಯು ನೀಡಿರುವ ಉತ್ತರಗಳನ್ನು ಈ ಪ್ರಕಟಣೆಯೊಂದಿಗೆ ಅಭ್ಯರ್ಥಿಗಳ ಮಾಹಿತಿಗಾಗಿ ಪ್ರಕಟಿಸಲಾಗಿದೆ.

19/2/22

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
(ಅರಣ್ಯ ಪಡೆ ಮುಖ್ಯಸ್ಥರು)

ದಿನಾಂಕ: 19.02.2022
ಸ್ಥಳ: ಬೆಂಗಳೂರು

# ಅನುಬಂಧ

## 339 ಅರಣ್ಯ ರಕ್ಷಕ ಹುದ್ದೆಗಳ ನೇರ ನೇಮಕಾತಿ ಕುರಿತು ದಿನಾಂಕ: 07.02.2022 ರಂದು ಪ್ರಕಟಿಸಿದ 1:1 (ಹುದ್ದೆ:ಅಭ್ಯರ್ಥಿ) ತಾತ್ಕಾಲಿಕ ಆಯ್ಕೆ ಪಟ್ಟಿಗೆ ಸ್ವೀಕರಿಸಲಾದ ಆಕ್ಷೇಪಣೆಗಳ ಕುರಿತು

| ಕ್ರ. ಸಂ. | ಅಭ್ಯರ್ಥಿಯ ಹೆಸರು ಮತ್ತು ಲಿಖಿತ ಪರೀಕ್ಷೆಯ ನೋಂದಣಿ ಸಂಖ್ಯೆ | ವೃತ್ತ | 1:1 (ಹುದ್ದೆ:ಅಭ್ಯರ್ಥಿ) ತಾತ್ಕಾಲಿಕ ಆಯ್ಕೆ ಪಟ್ಟಿಯ ಕುರಿತು ಅಭ್ಯರ್ಥಿಯ ಆಕ್ಷೇಪಣೆ | ಅಭ್ಯರ್ಥಿಯ ಆಕ್ಷೇಪಣೆ ಕುರಿತು ಇಲಾಖೆಯ ಷರಾ |
|---|---|---|---|---|
| 01 | ಮುರಗಯ್ಯ ಹೆಬ್ಬಾಳ್<br>ನೋಂದಣಿ ಸಂಖ್ಯೆ: 3000008 | ಮೈಸೂರು | ಮೈಸೂರು ವೃತ್ತದ 1:1 (ಹುದ್ದೆ:ಅಭ್ಯರ್ಥಿ) ತಾತ್ಕಾಲಿಕ ಆಯ್ಕೆ ಪಟ್ಟಿಯಲ್ಲಿ 3ಬಿ ಪ್ರವರ್ಗದ ಮಾಜಿ ಸೈನಿಕ 01 ಹುದ್ದೆಗೆ ಸಾಮಾನ್ಯ ಪ್ರವರ್ಗದ ಮಾಜಿ ಸೈನಿಕ ಅಭ್ಯರ್ಥಿಯಿಂದ (ರಾಜು ಎಸ್.) ಭರ್ತಿ ಮಾಡಲಾಗಿರುತ್ತದೆ. | ರಾಜು ಎಸ್., ನೋಂದಣಿ ಸಂಖ್ಯೆ: 4902134 ಇವರು 3ಬಿ ಪ್ರವರ್ಗದಡಿ ಮಾಜಿ ಸೈನಿಕ ಕೋಟಾದಡಿ ಮೀಸಲಾತಿಯನ್ನು ಕೋರಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಸದರಿಯವರು ನೇಮಕಾತಿ ಅಧಿಸೂಚನೆಯಲ್ಲಿ ಅಧಿಸೂಚಿಸಿರುವ ವಿದ್ಯಾರ್ಹತೆಯಲ್ಲಿ ಪಡೆದ ಅಂಕಗಳ ಮೆರಿಟ್ ಹಾಗೂ ಮೀಸಲಾತಿ ಆಧಾರದ ಮೇಲೆ 1:20 (ಹುದ್ದೆ:ಅಭ್ಯರ್ಥಿ) ಆಯ್ಕೆ ಪಟ್ಟಿಯಲ್ಲಿ ಸಾಮಾನ್ಯ ಪ್ರವರ್ಗದ ಮಾಜಿ ಸೈನಿಕ (GM – Ex-Serviceman) ಕೋಟಾದಡಿ ಆಯ್ಕೆಯಾಗಿರುತ್ತಾರೆ.<br><br>ಸದರಿಯವರ ಅರ್ಹತಾ ವಿದ್ಯಾರ್ಹತೆಯಲ್ಲಿ ಪಡೆದ ಅಂಕಗಳ ಮತ್ತು ಇಲಾಖೆಯು ನಡೆಸಿದ ಲಿಖಿತ ಪರೀಕ್ಷೆಯಲ್ಲಿ ಪಡೆದ ಒಟ್ಟು ಅಂಕಗಳ ಮೆರಿಟ್ ಆಧಾರದಲ್ಲಿ ಮತ್ತು ಅಧಿಸೂಚನೆಯಲ್ಲಿ ಅಧಿಸೂಚಿಸಿದ ಮೀಸಲಾತಿಯನ್ವಯ ಪ್ರವರ್ಗ 3ಬಿ – ಮಾಜಿ ಸೈನಿಕ ಕೋಟಾದಡಿ ಅರ್ಹರಾಗಿರುವುದರಿಂದ 1:1 (ಹುದ್ದೆ:ಅಭ್ಯರ್ಥಿ) ತಾತ್ಕಾಲಿಕ ಆಯ್ಕೆ ಪಟ್ಟಿಯಲ್ಲಿ ಆಯ್ಕೆ ಮಾಡಿರುವುದು ನಿಯಮಾನುಸಾರ ಸರಿ ಇರುತ್ತದೆ. |
| 02 | ಭಾರತಿ ಕುತಗನಹಳ್ಳಿ | - | ಅರಣ್ಯ ರಕ್ಷಕ ಹುದ್ದೆಗೆ ಸಂಬಂಧಿಸಿದಂತೆ ಹಿಂದಿನ ವರ್ಷಗಳಲ್ಲಿ ನಡೆಸಲಾಗಿರುವ ಲಿಖಿತ ಪರೀಕ್ಷೆಗಳ ಪ್ರಶ್ನೆ ಪತ್ರಿಕೆಗಳಿಗೆ ಹೋಲಿಕೆ ಮಾಡಿದಾಗ ಪ್ರಸ್ತುತ339 ಅರಣ್ಯ ರಕ್ಷಕ ಹುದ್ದೆಗೆ ದಿನಾಂಕ: 05.12.2021 ರಂದು ನಡೆಸಿರುವ ಲಿಖಿತ ಪರೀಕ್ಷೆಯ ಪ್ರಶ್ನೆ ಪತ್ರಿಕೆ ಕಠಿಣವಾಗಿರುತ್ತದೆ. ಆದರೂ, ಅಭ್ಯರ್ಥಿಗಳ ಕಟ್ ಆಫ್ ಅಂಕಗಳು ಹೆಚ್ಚಾಗಿರುವುದು ಕಂಡುಬಂದಿದ್ದು ಮತ್ತೊಮ್ಮೆ ಎಲ್ಲಾ ಒ.ಎಂ.ಆರ್. ಶೀಟ್ ಗಳನ್ನು ಪುನರ್ ಪರಿಶೀಲಿಸಲು ಕೋರಿರುತ್ತಾರೆ. | ಅರಣ್ಯ ರಕ್ಷಕ ಹುದ್ದೆಯ ಲಿಖಿತ ಪರೀಕ್ಷೆಯ ಪ್ರಶ್ನೆ ಪತ್ರಿಕೆಯು ಎಲ್ಲಾ ಅಭ್ಯರ್ಥಿಗಳಿಗೆ ಏಕರೂಪತೆಯಿಂದ ಕೂಡಿದ್ದು, ಸದರಿ ಆಕ್ಷೇಪಣೆಯನ್ನು ಪರಿಗಣಿಸಲು ಸಾಧ್ಯವಿರುವುದಿಲ್ಲ. |

18/02/22 19/2 18/2

| ಕ್ರ. ಸಂ. | ಅಭ್ಯರ್ಥಿಯ ಹೆಸರು ಮತ್ತು ಲಿಖಿತ ಪರೀಕ್ಷೆಯ ನೋಂದಣಿ ಸಂಖ್ಯೆ | ವೃತ್ತ | 1:1 (ಹುದ್ದೆ:ಅಭ್ಯರ್ಥಿ) ತಾತ್ಕಾಲಿಕ ಆಯ್ಕೆ ಪಟ್ಟಿಯ ಕುರಿತು ಅಭ್ಯರ್ಥಿಯ ಆಕ್ಷೇಪಣೆ | ಅಭ್ಯರ್ಥಿಯ ಆಕ್ಷೇಪಣೆ ಕುರಿತು ಇಲಾಖೆಯ ಷರಾ |
|---|---|---|---|---|
| 03 | ದೀಪ ಪಂದಪ್ಪ ಕಟ್ಟಿಮನಿ<br>ನೋಂದಣಿ ಸಂಖ್ಯೆ: 2900001 | ಮಂಗಳೂರು | ಕುಮಾರಿ ದೀಪ ಪಂದಪ್ಪ ಕಟ್ಟಿಮನಿ ಇವರು ಪರಿಶಿಷ್ಟ ಜಾತಿ – ಗ್ರಾಮೀಣ ಪ್ರವರ್ಗದಡಿ ಅರಣ್ಯ ರಕ್ಷಕ ಹುದ್ದೆಗೆ ಅರ್ಜಿ ಸಲ್ಲಿಸಿದ್ದು, ಲಿಖಿತ ಪರೀಕ್ಷೆಯಲ್ಲಿ 48 ಮತ್ತು ಶೈಕ್ಷಣಿಕ ವಿದ್ಯಾರ್ಹತೆಯಲ್ಲಿ 85.67 ಅಂಕಗಳನ್ನು ಪಡೆದಿದ್ದು, ಶೇಕಡವಾರು ಅರ್ಧದಷ್ಟು ಒಟ್ಟಾರೆಯಾಗಿ 66.83 ಅಂಕಗಳನ್ನು ಪಡೆದಿರುತ್ತಾರೆ. ಆದರೆ, ಈ ಹುದ್ದೆಗೆ ಆಯ್ಕೆಯಾದ ಅಭ್ಯರ್ಥಿಯು ಸಾಮಾನ್ಯ ಪ್ರವರ್ಗಕ್ಕೆ ಸೇರಿರುತ್ತಾರೆ. ಪರಿಶಿಷ್ಟ ಜಾತಿ – ಗ್ರಾಮೀಣ ಅಭ್ಯರ್ಥಿಗೆ ಅರ್ಹತೆ ಹೊಂದಿದ 1:20 ಆಯ್ಕೆ ಪಟ್ಟಿಯಿಂದ ಅಭ್ಯರ್ಥಿಗಳಿಂದ ಆಯ್ಕೆ ಮಾಡದೆ, ಸಾಮಾನ್ಯ ಪ್ರವರ್ಗದ ಇತರೆ ಅಭ್ಯರ್ಥಿಯನ್ನು ಆಯ್ಕೆ ಮಾಡಿರುವುದು ಏಕೆ ಎಂದು ಕೋರಲಾಗಿದೆ. | ಆಕಾಶ್, ನೋಂದಣಿ ಸಂಖ್ಯೆ: 2900047 ಇವರು ಪರಿಶಿಷ್ಟ ಜಾತಿ ಪ್ರವರ್ಗದಡಿ ಕನ್ನಡ ಮಾಧ್ಯಮ ಹಾಗೂ ಗ್ರಾಮೀಣ ಕೋಟಾದಡಿ ಮೀಸಲಾತಿಯನ್ನು ಕೋರಿಅರ್ಜಿಯನ್ನು ಸಲ್ಲಿಸಿರುತ್ತಾರೆ. ಸದರಿಯವರು ನೇಮಕಾತಿ ಅಧಿಸೂಚನೆಯಲ್ಲಿ ಅಧಿಸೂಚಿಸಿರುವ ವಿದ್ಯಾರ್ಹತೆಯಲ್ಲಿ ಪಡೆದ ಅಂಕಗಳ ಮೆರಿಟ್ ಹಾಗೂ ಮೀಸಲಾತಿ ಆಧಾರದ ಮೇಲೆ 1:20 (ಹುದ್ದೆ:ಅಭ್ಯರ್ಥಿ) ಆಯ್ಕೆ ಪಟ್ಟಿಯಲ್ಲಿ ಸಾಮಾನ್ಯ ಪ್ರವರ್ಗದ ಕನ್ನಡ ಮಾಧ್ಯಮ (GM - KM) ಕೋಟಾದಡಿ ಆಯ್ಕೆಯಾಗಿರುತ್ತಾರೆ.<br><br>ಸದರಿಯವರ ಅರ್ಹತಾ ವಿದ್ಯಾರ್ಹತೆಯಲ್ಲಿ ಪಡೆದ ಅಂಕಗಳ ಮತ್ತು ಇಲಾಖೆಯು ನಡೆಸಿದ ಲಿಖಿತ ಪರೀಕ್ಷೆಯಲ್ಲಿ ಪಡೆದ ಒಟ್ಟು ಅಂಕಗಳ ಮೆರಿಟ್ ಆಧಾರದಲ್ಲಿ ಮತ್ತು ಅಧಿಸೂಚನೆಯಲ್ಲಿ ಅಧಿಸೂಚಿಸಿದ ಮೀಸಲಾತಿಯನ್ವಯ ಪರಿಶಿಷ್ಟ ಜಾತಿ–ಗ್ರಾಮೀಣ ಕೋಟಾದಡಿ ಅರ್ಹರಾಗಿರುವುದರಿಂದ 1:1 (ಹುದ್ದೆ:ಅಭ್ಯರ್ಥಿ) ತಾತ್ಕಾಲಿಕ ಆಯ್ಕೆ ಪಟ್ಟಿಯಲ್ಲಿ ಆಯ್ಕೆ ಮಾಡಿರುವುದು ನಿಯಮಾನುಸಾರ ಸರಿ ಇರುತ್ತದೆ. |
| 04 | ಹರ್ಷಿತ್ ಪಿ.<br>ನೋಂದಣಿ ಸಂಖ್ಯೆ: 2200091 | ಬಳ್ಳಾರಿ | ಹರ್ಷಿತ್ ಪಿ., ನೋಂದಣಿ ಸಂಖ್ಯೆ: 2200091 ನಾನು ಕಾವೇರಿ ರೆಡ್ಡಿ, ನೋಂದಣಿ ಸಂಖ್ಯೆ: 2005513 ಇವರಿಗಿಂತ ಅತೀ ಹೆಚ್ಚು ಅಂಕಗಳನ್ನು ಗಳಿಸಿದ್ದು, 1:1 (ಹುದ್ದೆ:ಅಭ್ಯರ್ಥಿ) ತಾತ್ಕಾಲಿಕ ಆಯ್ಕೆ ಪಟ್ಟಿಯಲ್ಲಿ ಪರಿಗಣಿಸಲು ಕೋರಿದೆ. | ಕಾವೇರಿ ರೆಡ್ಡಿ, ನೋಂದಣಿ ಸಂಖ್ಯೆ: 2005513 ಇವರು 3ಎ ಪ್ರವರ್ಗಕ್ಕೆ ಸೇರಿದ್ದು, ಅರ್ಹತಾ ವಿದ್ಯಾರ್ಹತೆ ಪರೀಕ್ಷೆ ಹಾಗೂ ಲಿಖಿತ ಪರೀಕ್ಷೆಯಲ್ಲಿ ಹರ್ಷಿತ್ ಪಿ., ನೋಂದಣಿ ಸಂಖ್ಯೆ: 2200091 ಇವರಿಗಿಂತ ಹೆಚ್ಚಿನ ಅಂಕ ಗಳಿಸಿರುವುದರಿಂದ ಮೀಸಲಾತಿ ಪ್ರವರ್ಗದಲ್ಲಿ ಇತರೆ ಅಭ್ಯರ್ಥಿಗಳಿಗಿಂತ ಮೆರಿಟ್ ಹೊಂದಿರುವುದರಿಂದ 1:1 (ಹುದ್ದೆ:ಅಭ್ಯರ್ಥಿ) ತಾತ್ಕಾಲಿಕ ಆಯ್ಕೆ ಪಟ್ಟಿಯಲ್ಲಿ ಆಯ್ಕೆ ಮಾಡಿರುವುದು ನಿಯಮಾನುಸಾರ ಸರಿ ಇರುತ್ತದೆ. |
| 05 | ಕಾರ್ತಿಕ್ ಬಿ.<br>ನೋಂದಣಿ ಸಂಖ್ಯೆ: 2300233 | ಬೆಂಗಳೂರು | ಬೆಂಗಳೂರು ವೃತ್ತದ 1:1 (ಹುದ್ದೆ:ಅಭ್ಯರ್ಥಿ) ತಾತ್ಕಾಲಿಕ ಆಯ್ಕೆ ಪಟ್ಟಿಯಲ್ಲಿ ಕ್ರಮ ಸಂಖ್ಯೆ: 11 ಮತ್ತು 12 ರಲ್ಲಿ 2 ಅಭ್ಯರ್ಥಿಗಳು ಸಮಾನ ಶೇಕಡವಾರು ಅಂಕಗಳನ್ನು ಪಡೆದಿದ್ದು, ಸರ್ಕಾರದ ನಿಯಮದಂತೆ ಸಮಾನ ಅಂಕಗಳನ್ನು ಪಡೆದಿರುವಂತಹ ಸಂದರ್ಭದಲ್ಲಿ ಜನ್ಮ | ಕಾರ್ತಿಕ್ ಬಿ., ನೋಂದಣಿ ಸಂಖ್ಯೆ: 2300233 ಇವರ ಮನವಿಯನ್ನು ಪರಿಶೀಲಿಸಲಾಗಿ, ಸದರಿಯವರ ಜನ್ಮ ದಿನಾಂಕವು 15.11.1997 ಹಾಗೂ ಕ್ರಮ ಸಂಖ್ಯೆ: 11 ರಲ್ಲಿನ ಶ್ರೀಕಾಂತ್ ಬಿ. ಎಸ್. ಇವರ ಜನ್ಮ ದಿನಾಂಕವು 05.06.1998 ಇರುತ್ತದೆ. ಸದರಿ ಇಬ್ಬರೂ ಅಭ್ಯರ್ಥಿಗಳು ಸಾಮಾನ್ಯ |

18/02/22 19/2 18/

| ಕ್ರ. ಸಂ. | ಅಭ್ಯರ್ಥಿಯ ಹೆಸರು ಮತ್ತು ಲಿಖಿತ ಪರೀಕ್ಷೆಯ ನೋಂದಣಿ ಸಂಖ್ಯೆ | ವೃತ್ತ | 1:1 (ಹುದ್ದೆ:ಅಭ್ಯರ್ಥಿ) ತಾತ್ಕಾಲಿಕ ಆಯ್ಕೆ ಪಟ್ಟಿಯ ಕುರಿತು ಅಭ್ಯರ್ಥಿಯ ಆಕ್ಷೇಪಣೆ | ಅಭ್ಯರ್ಥಿಯ ಆಕ್ಷೇಪಣೆ ಕುರಿತು ಇಲಾಖೆಯ ಷರಾ |
|---|---|---|---|---|
| | | | ದಿನಾಂಕದ ಆಧಾರದ ಮೇಲೆ ಅಭ್ಯರ್ಥಿಗಳನ್ನು ಪರಿಗಣಿಸಲು ಕೋರಿರುತ್ತಾರೆ. | ಪ್ರವರ್ಗದ ಇತರೆ (GM – OTHERS) ಕೋಟಾದಡಿ 1:1 (ಹುದ್ದೆ:ಅಭ್ಯರ್ಥಿ) ತಾತ್ಕಾಲಿಕ ಆಯ್ಕೆ ಪಟ್ಟಿಯಲ್ಲಿ ಆಯ್ಕೆಯಾಗಿರುತ್ತಾರೆ.<br><br>ಕಾರ್ತಿಕ್ ಬಿ. ಇವರು ಜನ್ಮ ದಿನಾಂಕದ ಆಧಾರದ ಮೇಲೆ ಶ್ರೀಕಾಂತ್ ಬಿ. ಎಸ್. ಇವರಿಗಿಂತ ಹಿರಿಯರಾಗಿರುವುದರಿಂದ ಸದರಿಯವರ ಮನವಿಯನ್ನು ಪರಿಗಣಿಸಿ, ಬೆಂಗಳೂರು ವೃತ್ತದ 1:1 (ಹುದ್ದೆ:ಅಭ್ಯರ್ಥಿ) ತಾತ್ಕಾಲಿಕ ಆಯ್ಕೆ ಪಟ್ಟಿಯಲ್ಲಿ ಸರಿಪಡಿಸಲಾಗಿದೆ. |
| 06 | ಸುದರ್ಶನ್ ಕುಲಾಲ್<br>ನೋಂದಣಿ ಸಂಖ್ಯೆ: 2900027 | ಮಂಗಳೂರು | ಮಂಗಳೂರು ವೃತ್ತ 17 ಅರಣ್ಯ ರಕ್ಷಕ ಹುದ್ದೆಯಲ್ಲಿ 2ಎ – ಗ್ರಾಮೀಣ ಕೋಟಾದಡಿ ಅಖಿಲೇಶ್ ಇವರು ಆಯ್ಕೆಯಾಗಿದ್ದು, 1:20 ಆಯ್ಕೆ ಪಟ್ಟಿಯ 2ಎ – ಗ್ರಾಮೀಣ ಕೋಟಾದಡಿ ಇವರ ಹೆಸರು ಇರುವುದಿಲ್ಲ. | ಅಖಿಲೇಶ್, ನೋಂದಣಿ ಸಂಖ್ಯೆ: 2900004ಇವರು 2ಎ ಪ್ರವರ್ಗದಡಿ ಕನ್ನಡ ಮಾಧ್ಯಮ ಹಾಗೂ ಗ್ರಾಮೀಣ ಕೋಟಾದಡಿ ಮೀಸಲಾತಿಯನ್ನು ಕೋರಿಅರ್ಜಿಯನ್ನು ಸಲ್ಲಿಸಿರುತ್ತಾರೆ. ಸದರಿಯವರು ನೇಮಕಾತಿ ಅಧಿಸೂಚನೆಯಲ್ಲಿ ಅಧಿಸೂಚಿಸಿರುವ ವಿದ್ಯಾರ್ಹತೆಯಲ್ಲಿ ಪಡೆದ ಅಂಕಗಳ ಮೆರಿಟ್ ಹಾಗೂ ಮೀಸಲಾತಿ ಆಧಾರದ ಮೇಲೆ 1:20 (ಹುದ್ದೆ:ಅಭ್ಯರ್ಥಿ) ಆಯ್ಕೆ ಪಟ್ಟಿಯಲ್ಲಿ ಸಾಮಾನ್ಯ ಪ್ರವರ್ಗದ ಕನ್ನಡ ಮಾಧ್ಯಮ (GM - KM) ಕೋಟಾದಡಿ ಆಯ್ಕೆಯಾಗಿರುತ್ತಾರೆ.<br><br>ಸದರಿಯವರ ಅರ್ಹತಾ ವಿದ್ಯಾರ್ಹತೆಯಲ್ಲಿ ಪಡೆದ ಅಂಕಗಳ ಮತ್ತು ಇಲಾಖೆಯು ನಡೆಸಿದ ಲಿಖಿತ ಪರೀಕ್ಷೆಯಲ್ಲಿ ಪಡೆದ ಒಟ್ಟು ಅಂಕಗಳ ಮೆರಿಟ್ ಆಧಾರದಲ್ಲಿ ಮತ್ತು ಅಧಿಸೂಚನೆಯಲ್ಲಿ ಅಧಿಸೂಚಿಸಿದ ಮೀಸಲಾತಿಯನ್ವಯ 2ಎ –ಗ್ರಾಮೀಣ ಕೋಟಾದಡಿ ಅರ್ಹರಾಗಿರುವುದರಿಂದ 1:1 (ಹುದ್ದೆ:ಅಭ್ಯರ್ಥಿ) ತಾತ್ಕಾಲಿಕ ಆಯ್ಕೆ ಪಟ್ಟಿಯಲ್ಲಿ ಆಯ್ಕೆ ಮಾಡಿರುವುದು ನಿಯಮಾನುಸಾರ ಸರಿ ಇರುತ್ತದೆ. |
| 07 | ಮನು ಕೆ.<br>ನೋಂದಣಿ ಸಂಖ್ಯೆ: 2800577 | ಕೆನರಾ | ನಾನು ಕೆನರಾ ವೃತ್ತದಲ್ಲಿ ಅರಣ್ಯ ರಕ್ಷಕ ಹುದ್ದೆಯ ನೇಮಕಾತಿಯಲ್ಲಿ ಆಯ್ಕೆಯಾಗಿದ್ದೇನೆ. ಮೇಲಿನ ವಿಷಯದಲ್ಲಿ ತಿಳಿಸಿರುವಂತೆ ನಾನು ಜೂನ್ 2020 ರಲ್ಲಿ ಅರ್ಜಿ ಸಲ್ಲಿಸಿರುತ್ತೇನೆ. ಅರ್ಜಿಯ ನಕಲು ಎಲ್ಲೋ | ಅರಣ್ಯ ರಕ್ಷಕ ಹುದ್ದೆಯ ಅಧಿಸೂಚನೆಯ ಕಂಡಿಕೆ (1)ರ ಅರ್ಜಿ ಸಲ್ಲಿಸುವ ವಿಧಾನದಲ್ಲಿ ಅಭ್ಯರ್ಥಿಯು ಆನ್ ಲೈನ್ ನಲ್ಲಿ ಅರ್ಜಿ ಸಲ್ಲಿಸಿದ ನಂತರ ತಮ್ಮ ಮಾಹಿತಿಗಾಗಿ ಭರ್ತಿ ಮಾಡಿದ ಆನ್ ಲೈನ್ ಅರ್ಜಿಯ ಒಂದು ಜೆರಾಕ್ಸ್ |

18/02/22 19/2 19/2

| ಕ್ರ. ಸಂ. | ಅಭ್ಯರ್ಥಿಯ ಹೆಸರು ಮತ್ತು ಲಿಖಿತ ಪರೀಕ್ಷೆಯ ನೋಂದಣಿ ಸಂಖ್ಯೆ | ವೃತ್ತ | 1:1 (ಹುದ್ದೆ:ಅಭ್ಯರ್ಥಿ) ತಾತ್ಕಾಲಿಕ ಆಯ್ಕೆ ಪಟ್ಟಿಯ ಕುರಿತು ಅಭ್ಯರ್ಥಿಯ ಆಕ್ಷೇಪಣೆ | ಅಭ್ಯರ್ಥಿಯ ಆಕ್ಷೇಪಣೆ ಕುರಿತು ಇಲಾಖೆಯ ಪರಾ |
|---|---|---|---|---|
| | | | ಕಾಣೆಯಾಗಿದೆ. ನಾವು ನೇಮಕಾತಿಗೆ ಅರ್ಜಿ ಸಲ್ಲಿಸಿ ಸುಮಾರು 2 ವರ್ಷಗಳಾಗಿವೆ. ಹಾಗಾಗಿ ನಾವು ಅರ್ಜಿ ಸಲ್ಲಿಸಿದ ಆನ್‌ಲೈನ್ ಅಪ್ಲಿಕೇಶನ್ ಅನ್ನು ಡೌನ್‌ಲೋಡ್ ಮಾಡಲು ಲಿಂಕ್ ಅನ್ನು ಸಕ್ರಿಯಗೊಳಿಸಲು ನಾನು ನಿಮ್ಮನ್ನು ವಿನಂತಿಸುತ್ತಿದ್ದೇನೆ. ಅನೇಕ ಆಕಾಂಕ್ಷಿಗಳು ತಮ್ಮ ಆನ್‌ಲೈನ್ ಅರ್ಜಿಯ ಅಗತ್ಯವನ್ನು ಹೊಂದಿದ್ದಾರೆ. ಆದ್ದರಿಂದ ಮತ್ತೊಮ್ಮೆ ಲಿಂಕ್ ಅನ್ನು ಸಕ್ರಿಯಗೊಳಿಸಲು ಕೋರುತ್ತೇನೆ. | ಪ್ರತಿಯನ್ನು ತೆಗೆದು ತಮ್ಮ ಬಳಿ ಇಟ್ಟುಕೊಳ್ಳತಕ್ಕದ್ದು ಎಂದು ತಿಳಿಸಲಾಗಿದ್ದು, ಆನ್ ಲೈನ್ ನಲ್ಲಿ ಅರ್ಜಿ ಸಲ್ಲಿಸಿದ ಪ್ರತಿಯನ್ನು ಸುರಕ್ಷಿತವಾಗಿ ಇಟ್ಟುಕೊಳ್ಳುವುದು ಅಭ್ಯರ್ಥಿಯ ಜವಾಬ್ದಾರಿಯಾಗಿರುತ್ತದೆ.<br><br>ಪ್ರಸ್ತುತ ಈ ಹಂತದಲ್ಲಿ ಆನ್ ಲೈನ್ ಅರ್ಜಿಯ ಲಿಂಕ್ ನ್ನು ಮತ್ತೊಮ್ಮೆ ಸಕ್ರಿಯಗೊಳಿಸಲು ಅವಕಾಶವಿರುವುದಿಲ್ಲ. |
| 08 | ಮುರಗಯ್ಯ ಹೆಬ್ಬಾಳ್<br>ನೋಂದಣಿ ಸಂಖ್ಯೆ: 3000008 | ಮೈಸೂರು | ಮೈಸೂರು ವೃತ್ತದ 1:1 (ಹುದ್ದೆ:ಅಭ್ಯರ್ಥಿ) ತಾತ್ಕಾಲಿಕ ಆಯ್ಕೆ ಪಟ್ಟಿಯಲ್ಲಿ 3ಬಿ ಪ್ರವರ್ಗದ ಮಾಜಿ ಸೈನಿಕ 01 ಹುದ್ದೆಗೆ ಸಾಮಾನ್ಯ ಪ್ರವರ್ಗದ ಮಾಜಿ ಸೈನಿಕ ಅಭ್ಯರ್ಥಿಯಿಂದ (ರಾಜು ಎಸ್.) ಭರ್ತಿ ಮಾಡಲಾಗಿರುತ್ತದೆ. | ರಾಜು ಎಸ್., ನೋಂದಣಿ ಸಂಖ್ಯೆ: 4902134 ಇವರು 3ಬಿ ಪ್ರವರ್ಗದಡಿ ಮಾಜಿ ಸೈನಿಕ ಕೋಟಾದಡಿ ಮೀಸಲಾತಿಯನ್ನು ಕೋರಿಅರ್ಜಿಯನ್ನು ಸಲ್ಲಿಸಿರುತ್ತಾರೆ. ಸದರಿಯವರು ನೇಮಕಾತಿ ಅಧಿಸೂಚನೆಯಲ್ಲಿ ಅಧಿಸೂಚಿಸಿರುವ ವಿದ್ಯಾರ್ಹತೆಯಲ್ಲಿ ಪಡೆದ ಅಂಕಗಳ ಮೆರಿಟ್ ಹಾಗೂ ಮೀಸಲಾತಿ ಆಧಾರದ ಮೇಲೆ 1:20 (ಹುದ್ದೆ:ಅಭ್ಯರ್ಥಿ) ಆಯ್ಕೆ ಪಟ್ಟಿಯಲ್ಲಿ ಸಾಮಾನ್ಯ ಪ್ರವರ್ಗದ ಮಾಜಿ ಸೈನಿಕ (GM – Ex-Serviceman)ಕೋಟಾದಡಿ ಆಯ್ಕೆಯಾಗಿರುತ್ತಾರೆ.<br><br>ಸದರಿಯವರ ಅರ್ಹತಾ ವಿದ್ಯಾರ್ಹತೆಯಲ್ಲಿ ಪಡೆದ ಅಂಕಗಳ ಮತ್ತು ಇಲಾಖೆಯು ನಡೆಸಿದ ಲಿಖಿತ ಪರೀಕ್ಷೆಯಲ್ಲಿ ಪಡೆದ ಒಟ್ಟು ಅಂಕಗಳ ಮೆರಿಟ್ ಆಧಾರದಲ್ಲಿ ಮತ್ತು ಅಧಿಸೂಚನೆಯಲ್ಲಿ ಅಧಿಸೂಚಿಸಿದ ಮೀಸಲಾತಿಯನ್ವಯ ಪ್ರವರ್ಗ 3ಬಿ – ಮಾಜಿ ಸೈನಿಕ ಕೋಟಾದಡಿ ಅರ್ಹರಾಗಿರುವುದರಿಂದ 1:1 (ಹುದ್ದೆ:ಅಭ್ಯರ್ಥಿ) ತಾತ್ಕಾಲಿಕ ಆಯ್ಕೆ ಪಟ್ಟಿಯಲ್ಲಿ ಆಯ್ಕೆ ಮಾಡಿರುವುದು ನಿಯಮಾನುಸಾರ ಸರಿ ಇರುತ್ತದೆ. |
| 09 | ವಿಶ್ವನಾಥ ವಿಜಾಪುರ<br>ನೋಂದಣಿ ಸಂಖ್ಯೆ: 2700138 | ಹಾಸನ | ನಾನು ಅರಣ್ಯ ರಕ್ಷಕ ಹುದ್ದೆಗೆ ಅರ್ಜಿ ಸಲ್ಲಿಸಿ, ದೈಹಿಕ ಪರೀಕ್ಷೆಯಲ್ಲಿ ಉತ್ತೀರ್ಣನಾಗಿ ದಿನಾಂಕ: 05.12.2021 ರಂದು ನಡೆದ ಲಿಖಿತ ಪರೀಕ್ಷೆಗೆ ಹಾಜರಾಗಿದ್ದೇನೆ.<br><br>ನನ್ನ ದ್ವಿತೀಯ ಪಿಯುಸಿ ಶೇಕಡ 50% ಅಂಕ 43.25 | ವಿಶ್ವನಾಥ ವಿಜಾಪುರ, ನೋಂದಣಿ ಸಂಖ್ಯೆ: 2700138 ಇವರು 3ಬಿ ಪ್ರವರ್ಗದಡಿ ಕನ್ನಡ ಮಾಧ್ಯಮ ಕೋಟಾದಡಿ ಮೀಸಲಾತಿಯನ್ನು ಕೋರಿಅರ್ಜಿಯನ್ನು ಸಲ್ಲಿಸಿರುತ್ತಾರೆ.<br><br>ಸದರಿಯವರ ಅರ್ಹತಾ ವಿದ್ಯಾರ್ಹತೆಯಲ್ಲಿ ಪಡೆದ |

18/02/22

| ಕ್ರ. ಸಂ. | ಅಭ್ಯರ್ಥಿಯ ಹೆಸರು ಮತ್ತು ಲಿಖಿತ ಪರೀಕ್ಷೆಯ ನೋಂದಣಿ ಸಂಖ್ಯೆ | ವೃತ್ತ | 1:1 (ಹುದ್ದೆ:ಅಭ್ಯರ್ಥಿ) ತಾತ್ಕಾಲಿಕ ಆಯ್ಕೆ ಪಟ್ಟಿಯ ಕುರಿತು ಅಭ್ಯರ್ಥಿಯ ಆಕ್ಷೇಪಣೆ | ಅಭ್ಯರ್ಥಿಯ ಆಕ್ಷೇಪಣೆ ಕುರಿತು ಇಲಾಖೆಯ ಷರಾ |
|---|---|---|---|---|
| | | | ಹಾಗೂ ಲಿಖಿತ ಪರೀಕ್ಷೆಯ ಶೇಕಡ 50% ಅಂಕ 30.50 ಇರುತ್ತದೆ. ನನ್ನ ವಿದ್ಯಾರ್ಹತೆ + CET ಯ 50% ಒಟ್ಟು ಅಂಕ 73.75 ಆಗುತ್ತದೆ.<br><br>ಆದರೆ, ತಾವು 72.83 ಪಡೆದ ಅಭ್ಯರ್ಥಿಯನ್ನು ತಾತ್ಕಾಲಿಕ ಆಯ್ಕೆ ಪಟ್ಟಿಯಲ್ಲಿ ಆಯ್ಕೆ ಮಾಡಿರುತ್ತಾರೆ. ದಯಮಾಡಿ ಅವರಿಗಿಂತ ಹೆಚ್ಚು ಅಂಕ ಪಡೆದ ನನ್ನನ್ನು ಆಯ್ಕೆಗೆ ಪರಿಗಣಿಸಬೇಕೆಂದು ಈ ಮೂಲಕ ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ. | ಶೇಕಡವಾರು ಒಟ್ಟು ಅಂಕಗಳು 86.50 ಮತ್ತು ಇಲಾಖೆಯು ನಡೆಸಿದ ಲಿಖಿತ ಪರೀಕ್ಷೆಯಲ್ಲಿ ಪಡೆದ ಒಟ್ಟು ಅಂಕಳು 47 ಆಗಿರುತ್ತದೆ. ಅಧಿಸೂಚನೆಯಲ್ಲಿ ಅಧಿಸೂಚಿಸಿರುವಂತೆ ಅರ್ಹತಾ ವಿದ್ಯಾರ್ಹತೆ ಹಾಗೂ ಲಿಖಿತ ಪರೀಕ್ಷೆ ಅಂಕಗಳು ಸೇರಿ ಶೇಕಡ 50% ರಷ್ಟು ಪರಿಗಣಿಸಿದಾಗ ಒಟ್ಟು 66.75 ಅಂಕಗಳನ್ನು ಪಡೆದಿರುತ್ತಾರೆ.<br><br>ಅಧಿಸೂಚನೆಯಲ್ಲಿ ಹಾಸನ ವೃತ್ತದ ಅರಣ್ಯ ರಕ್ಷಕ ಹುದ್ದೆಗೆ 3ಬಿ (ಇತರೆ) ಪ್ರವರ್ಗದಡಿ 1 ಹುದ್ದೆಯನ್ನು ಮೀಸಲಿರಿಸಲಾಗಿದ್ದು, ಮೇರಿಟ್ ಆಧಾರದ ಮೇಲೆ 3ಬಿ (ಇತರೆ) ಪ್ರವರ್ಗದಡಿ 72.83 ಅಂಕಗಳನ್ನು ಪಡೆದ ಅಭ್ಯರ್ಥಿಯನ್ನು ಆಯ್ಕೆ ಮಾಡಿರುವುದು ನಿಯಮಾನುಸಾರ ಸರಿ ಇರುತ್ತದೆ. |
| 10 | ಜ್ಯೋತಿಭಾ ಹುಬ್ಬಳ್ಳಿ<br>ನೋಂದಣಿ ಸಂಖ್ಯೆ: 2800042 | ಕೆನರಾ | ಗಾಳೆಪ್ಪ ಕೋಲಾರ, ಅರ್ಜಿ ಸಂಖ್ಯೆ: 4707612 ಇವರು 1:20 ಪಟ್ಟಿಯಲ್ಲಿ SC ಕೋಟಾದಲ್ಲಿ select ಆಗಿ, ಈಗ 1:1 provisional ಲಿಸ್ಟ ನಲ್ಲಿ select ಮಾಡಿದ್ದಾರೆ. ಇದಕ್ಕೆ ಕಾರಣ ಏನು ಅಂತ ಗೊತ್ತಾಗಲಿಲ್ಲ. | ಗಾಳೆಪ್ಪ ಕೋಲಾರ, ನೋಂದಣಿ ಸಂಖ್ಯೆ: 2800875 ಇವರು ಪರಿಶಿಷ್ಟ ಜಾತಿ ಪ್ರವರ್ಗದಡಿ ಕನ್ನಡ ಮಾಧ್ಯಮ ಮತ್ತು ಅಂಗವಿಕಲ (ಕುಷ್ಠ ರೋಗದಿಂದ ಗುಣಮುಖ ಹೊಂದಿದ ಅಭ್ಯರ್ಥಿ) ಕೋಟಾದಡಿ ಮೀಸಲಾತಿಯನ್ನು ಕೋರಿಅರ್ಜಿಯನ್ನು ಸಲ್ಲಿಸಿರುತ್ತಾರೆ. ಸದರಿಯವರು ನೇಮಕಾತಿ ಅಧಿಸೂಚನೆಯಲ್ಲಿ ಅಧಿಸೂಚಿಸಿರುವ ವಿದ್ಯಾರ್ಹತೆಯಲ್ಲಿ ಪಡೆದ ಅಂಕಗಳ ಮೆರಿಟ್ ಹಾಗೂ ಮೀಸಲಾತಿ ಆಧಾರದ ಮೇಲೆ 1:20 (ಹುದ್ದೆ:ಅಭ್ಯರ್ಥಿ) ಆಯ್ಕೆ ಪಟ್ಟಿಯಲ್ಲಿ ಪರಿಶಿಷ್ಟ ಜಾತಿ ಪ್ರವರ್ಗದ ಇತರೆ (SC – Others) ಕೋಟಾದಡಿ ಆಯ್ಕೆಯಾಗಿರುತ್ತಾರೆ.<br><br>ಸದರಿಯವರ ಅರ್ಹತಾ ವಿದ್ಯಾರ್ಹತೆಯಲ್ಲಿ ಪಡೆದ ಅಂಕಗಳ ಮತ್ತು ಇಲಾಖೆಯು ನಡೆಸಿದ ಲಿಖಿತ ಪರೀಕ್ಷೆಯಲ್ಲಿ ಪಡೆದ ಒಟ್ಟು ಅಂಕಗಳ ಮೆರಿಟ್ ಆಧಾರದಲ್ಲಿ ಮತ್ತು ಅಧಿಸೂಚನೆಯಲ್ಲಿ ಅಧಿಸೂಚಿಸಿದ ಮೀಸಲಾತಿಯನ್ವಯ ಸಾಮಾನ್ಯ ಪ್ರವರ್ಗ– ಅಂಗವಿಕಲ (ಕುಷ್ಠ ರೋಗದಿಂದ ಗುಣಮುಖ ಹೊಂದಿದ ಅಭ್ಯರ್ಥಿ) ಕೋಟಾದಡಿ ಅರ್ಹರಾಗಿರುವುದರಿಂದ 1:1 |

18/02/22 19/2 18/2

| ಕ್ರ. ಸಂ. | ಅಭ್ಯರ್ಥಿಯ ಹೆಸರು ಮತ್ತು ಲಿಖಿತ ಪರೀಕ್ಷೆಯ ನೋಂದಣಿ ಸಂಖ್ಯೆ | ವೃತ್ತ | 1:1 (ಹುದ್ದೆ:ಅಭ್ಯರ್ಥಿ) ತಾತ್ಕಾಲಿಕ ಆಯ್ಕೆ ಪಟ್ಟಿಯ ಕುರಿತು ಅಭ್ಯರ್ಥಿಯ ಆಕ್ಷೇಪಣೆ | ಅಭ್ಯರ್ಥಿಯ ಆಕ್ಷೇಪಣೆ ಕುರಿತು ಇಲಾಖೆಯ ಷರಾ |
|---|---|---|---|---|
| | | | | (ಹುದ್ದೆ:ಅಭ್ಯರ್ಥಿ) ತಾತ್ಕಾಲಿಕ ಆಯ್ಕೆ ಪಟ್ಟಿಯಲ್ಲಿ ಆಯ್ಕೆ ಮಾಡಿರುವುದು ನಿಯಮಾನುಸಾರ ಸರಿ ಇರುತ್ತದೆ. |
| 11 | ಶ್ರೀಶೈಲ ನಾವಿ<br>ನೋಂದಣಿ ಸಂಖ್ಯೆ: 2500041 | ಚಿಕ್ಕಮಗಳೂರು | ನಾನು ಶ್ರೀಶೈಲಎಸ್. ನಾವಿ, 2019 ರ ಶೈಕ್ಷಣಿಕ ವರ್ಷದಲ್ಲಿ ಚಿಕ್ಕಮಗಳೂರು ಪ್ರದೇಶದ ಅರಣ್ಯ ರಕ್ಷಕ ಹುದ್ದೆಗೆ ಅರ್ಜಿ ಸಲ್ಲಿಸಿದ್ದೇನೆ. ಆದರೆ ಪಿಯುಸಿಯಲ್ಲಿ ಪಡೆದ ವಾಸ್ತವಿಕ ಅಂಕಗಳಲ್ಲಿ ಸ್ವಲ್ಪ ವ್ಯತ್ಯಾಸವಿದೆ ಮತ್ತು ನಾನು ಅರ್ಜಿಯಲ್ಲಿ ನಮೂದಿಸಿರುವುದು ತಪ್ಪಾಗಿದೆ. ಆದ್ದರಿಂದ ನಾನು ನಮೂದಿಸಿದಾಗ ಒಟ್ಟು ಅಂಕಗಳನ್ನು ಸರಿಪಡಿಸಲು ಬಯಸುತ್ತೇನೆ. | ಅರಣ್ಯ ರಕ್ಷಕ ಹುದ್ದೆಯಮೂಲ ದಾಖಲೆಗಳ ಪರಿಶೀಲನೆ ಸಮಯದಲ್ಲಿ ಅರ್ಹತಾ ವಿದ್ಯಾರ್ಹತೆಯಲ್ಲಿ ಪಡೆದಿರುವ ಅಂಕಗಳನ್ನು ಪರಿಶೀಲಿಸಿ ಮತ್ತು ಲಿಖಿತ ಪರೀಕ್ಷೆಯಲ್ಲಿ ಪಡೆದಿರುವ ಅಂಕಗಳ ಮೆರಿಟ್ ಆಧಾರದ ಮೇಲೆ ಅರಣ್ಯ ರಕ್ಷಕ ಹುದ್ದೆಗೆ ಆಯ್ಕೆ ಮಾಡುವ ಕುರಿತು ಪರಿಶೀಲಿಸಲಾಗುವುದು. |
| 12 | ತೇಜು ರಾಥೋಡ್<br>ನೋಂದಣಿ ಸಂಖ್ಯೆ: 2800488 | ಚಿಕ್ಕಮಗಳೂರು | ಅರ್ಜಿ ಸಂಖ್ಯೆ: 4707612 ಅಭ್ಯರ್ಥಿ ಸಂಖ್ಯೆ: Galeppa Y Kolar ಇವರು 1:20 ಪಟ್ಟಿಯಲ್ಲಿ SC – Others ಕೋಟಾದಡಿ ಆಯ್ಕೆಯಾಗಿರುತ್ತಾರೆ. ಆದರೆ, 1:1 ತಾತ್ಕಾಲಿಕ ಆಯ್ಕೆ ಪಟ್ಟಿಯಲ್ಲಿ ಕುಷ್ಠರೋಗ GM ನಲ್ಲಿ ಆಯ್ಕೆಯಾಗಿದ್ದಾರೆ. | ಗಾಳೆಪ್ಪ ಕೋಲಾರ, ನೋಂದಣಿ ಸಂಖ್ಯೆ: 2800875 ಇವರು ಪರಿಶಿಷ್ಟ ಜಾತಿ ಪ್ರವರ್ಗದಡಿ ಕನ್ನಡ ಮಾಧ್ಯಮ ಮತ್ತು ಅಂಗವಿಕಲ (ಕುಷ್ಠ ರೋಗದಿಂದ ಗುಣಮುಖ ಹೊಂದಿದ ಅಭ್ಯರ್ಥಿ) ಕೋಟಾದಡಿ ಮೀಸಲಾತಿಯನ್ನು ಕೋರಿಅರ್ಜಿಯನ್ನು ಸಲ್ಲಿಸಿರುತ್ತಾರೆ. ಸದರಿಯವರು ನೇಮಕಾತಿ ಅಧಿಸೂಚನೆಯಲ್ಲಿ ಅಧಿಸೂಚಿಸಿರುವ ವಿದ್ಯಾರ್ಹತೆಯಲ್ಲಿ ಪಡೆದ ಅಂಕಗಳ ಮೆರಿಟ್ ಹಾಗೂ ಮೀಸಲಾತಿ ಆಧಾರದ ಮೇಲೆ 1:20 (ಹುದ್ದೆ:ಅಭ್ಯರ್ಥಿ) ಆಯ್ಕೆ ಪಟ್ಟಿಯಲ್ಲಿ ಪರಿಶಿಷ್ಟ ಜಾತಿ ಪ್ರವರ್ಗದ ಇತರೆ (SC – Others)ಕೋಟಾದಡಿ ಆಯ್ಕೆಯಾಗಿರುತ್ತಾರೆ.<br><br>ಸದರಿಯವರ ಅರ್ಹತಾ ವಿದ್ಯಾರ್ಹತೆಯಲ್ಲಿ ಪಡೆದ ಅಂಕಗಳ ಮತ್ತು ಇಲಾಖೆಯು ನಡೆಸಿದ ಲಿಖಿತ ಪರೀಕ್ಷೆಯಲ್ಲಿ ಪಡೆದ ಒಟ್ಟು ಅಂಕಗಳ ಮೆರಿಟ್ ಆಧಾರದಲ್ಲಿ ಮತ್ತು ಅಧಿಸೂಚನೆಯಲ್ಲಿ ಅಧಿಸೂಚಿಸಿದ ಮೀಸಲಾತಿಯನ್ವಯ ಸಾಮಾನ್ಯ ಪ್ರವರ್ಗ – ಅಂಗವಿಕಲ (ಕುಷ್ಠ ರೋಗದಿಂದ ಗುಣಮುಖ ಹೊಂದಿದ ಅಭ್ಯರ್ಥಿ) ಕೋಟಾದಡಿ ಅರ್ಹರಾಗಿರುವುದರಿಂದ 1:1 (ಹುದ್ದೆ:ಅಭ್ಯರ್ಥಿ) ತಾತ್ಕಾಲಿಕ ಆಯ್ಕೆ ಪಟ್ಟಿಯಲ್ಲಿ ಆಯ್ಕೆ ಮಾಡಿರುವುದು ನಿಯಮಾನುಸಾರ ಸರಿ ಇರುತ್ತದೆ. |
| 13 | ಅರುಣ್ ಕುಮಾರ್ ಡಿ. ಎನ್.<br>ನೋಂದಣಿ ಸಂಖ್ಯೆ: 3100406 | ಶಿವಮೊಗ್ಗ | ಅರುಣ್ ಕುಮಾರ್ ಡಿ. ಎನ್., ನೋಂದಣಿ ಸಂಖ್ಯೆ: 3100406 ಆದ ನಾನು ಶಿವಮೊಗ್ಗ ವೃತ್ತಕ್ಕೆ ಅರ್ಜಿಯನ್ನು | ಅರಣ್ಯ ರಕ್ಷಕ ಹುದ್ದೆಯ ಅಧಿಸೂಚನೆಯ ಕಂಡಿಕೆ (13.7) ರಲ್ಲಿ ತಿಳಿಸಿರುವಂತೆ ಅಭ್ಯರ್ಥಿಗಳು ಆನ್ ಲೈನ್ ಅರ್ಜಿಯಲ್ಲಿ |

18/02/22 19/2 18/-

| ಕ್ರ. ಸಂ. | ಅಭ್ಯರ್ಥಿಯ ಹೆಸರು ಮತ್ತು ಲಿಖಿತ ಪರೀಕ್ಷೆಯ ನೋಂದಣಿ ಸಂಖ್ಯೆ | ವೃತ್ತ | 1:1 (ಹುದ್ದೆ:ಅಭ್ಯರ್ಥಿ) ತಾತ್ಕಾಲಿಕ ಆಯ್ಕೆ ಪಟ್ಟಿಯ ಕುರಿತು ಅಭ್ಯರ್ಥಿಯ ಆಕ್ಷೇಪಣೆ | ಅಭ್ಯರ್ಥಿಯ ಆಕ್ಷೇಪಣೆ ಕುರಿತು ಇಲಾಖೆಯ ಷರಾ |
|---|---|---|---|---|
| | | | ಸಲ್ಲಿಸಿರುತ್ತೇನೆ. ನಾನು ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ನನ್ನ ವಾಸ ಸ್ಥಳ "ನಂ. 8946, 2ನೇ ಕ್ರಾಸ್, ಡೂಮ್ ಲೈಟ್ ಸರ್ಕಲ್, ಆರ್. ಎಂ. ಯಾರ್ಡ್, ಚೌಡೇಶ್ವರಿ ದೇವಸ್ಥಾನದ ಹತ್ತಿರ, ಮಧುಗಿರಿ, ತುಮಕೂರು 572132" ಎಂದು ನಮೂದಿಸಿರುತ್ತೇನೆ.<br>ಪ್ರಸ್ತುತ ನಾನು ದುಗ್ಗೇನ ಹಳ್ಳಿ, ಹೊಳವನ ಹಳ್ಳಿ ಅಂಚೆ, ಕೊರಟಗೆರೆ ತಾಲ್ಲೂಕು, ತುಮಕೂರು ಜಿಲ್ಲೆ –572121 ಇಲ್ಲಿ ವಾಸವಾಗಿರುವುದರಿಂದ ನಾನು ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ನಮೂದಿಸಿದ ವಾಸ ಸ್ಥಳವನ್ನು ಬದಲಾವಣೆ ಮಾಡಿಕೊಡಬೇಕಾಗಿ ತಮ್ಮಲ್ಲಿ ಕೋರುತ್ತೇನೆ. | ನೀಡಿರುವ ಮಾಹಿತಿ / ವಿವರಗಳನ್ನು ಯಾವುದೇ ಹಂತದಲ್ಲಿಯೂ ಬದಲಾವಣೆ ಮಾಡಲು ಅವಕಾಶ ನೀಡಲಾಗುವುದಿಲ್ಲ ಎಂದು ತಿಳಿಸಿದ್ದು, ಈ ಹಂತದಲ್ಲಿ ಯಾವುದೇ ಬದಲಾವಣೆ ಮಾಡಲು ಅವಕಾಶವಿರುವುದಿಲ್ಲ. |
| 14 | ಸಚಿನ್ ಆರ್. ವಿ.<br>ನೋಂದಣಿ ಸಂಖ್ಯೆ: 3000093 | ಮೈಸೂರು | ಆನ್ ಲೈನ್ ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ಕೈತಪ್ಪಿನಿಂದ ದ್ವಿತೀಯ ಪಿಯುಸಿ ಶೇಕಡವಾರು ಅಂಕಗಳನ್ನು 89% ಬದಲಾಗಿ, 90.4% ಎಂದು ನಮೂದಿಸಿದ್ದು, ಅದನ್ನು ಸರಿಪಡಿಸಿ, ಅರಣ್ಯ ರಕ್ಷಕ ಹುದ್ದೆಗೆ ಆಯ್ಕೆ ಮಾಡುವಂತೆ ಕೋರುತ್ತೇನೆ. | ಅರಣ್ಯ ರಕ್ಷಕ ಹುದ್ದೆಯ ಮೂಲ ದಾಖಲೆಗಳ ಪರಿಶೀಲನೆ ಸಮಯದಲ್ಲಿ ಅರ್ಹತಾ ವಿದ್ಯಾರ್ಹತೆಯಲ್ಲಿ ಪಡೆದ ಅಂಕಗಳನ್ನು ಗಣನೆಗೆ ತೆಗೆದುಕೊಂಡು ಮತ್ತು ಇಲಾಖೆಯು ನಡೆಸಿದ ಲಿಖಿತ ಪರೀಕ್ಷೆಯಲ್ಲಿ ಪಡೆದ ಒಟ್ಟು ಅಂಕಗಳ ಮೆರಿಟ್ ಆಧಾರದಲ್ಲಿ ಮತ್ತು ಅಧಿಸೂಚನೆಯಲ್ಲಿ ಅಧಿಸೂಚಿಸಿದ ಮೀಸಲಾತಿಯನ್ವಯ ಮೆರಿಟ್ ಆಧಾರದ ಮೇಲೆ ಅರ್ಹರಿದ್ದಲ್ಲಿ ಆಯ್ಕೆ ಮಾಡುವ ಕುರಿತು ಅಥವಾ ಮೆರಿಟ್ ಆಧಾರದ ಮೇಲೆ ಅನರ್ಹರಿದ್ದಲ್ಲಿ ಆಯ್ಕೆ ಪಟ್ಟಿಯಿಂದ ಕೈಬಿಡುವ ಕುರಿತು ಪರಿಶೀಲಿಸಲಾಗುವುದು. |
| 15 | ಪುನೀತ್ ಕುಮಾರ್ ಎಸ್.<br>ನೋಂದಣಿ ಸಂಖ್ಯೆ: 2300093 | ಬೆಂಗಳೂರು | ಆನ್ ಲೈನ್ ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ಕೈತಪ್ಪಿನಿಂದ ಮೂಲ ಜಾತಿಯನ್ನು 3ಬಿ ಪ್ರವರ್ಗದ ಬದಲಾಗಿ ಸಾಮಾನ್ಯ ಅಭ್ಯರ್ಥಿ ಎಂದು ನಮೂದಿಸಿರುತ್ತೇನೆ. ಇದನ್ನು ಸರಿಪಡಿಸಿ, ಅರಣ್ಯ ರಕ್ಷಕ ಹುದ್ದೆಗೆ 3ಬಿ ಪ್ರವರ್ಗದಡಿ ಆಯ್ಕೆ ಮಾಡುವಂತೆ ಕೋರುತ್ತೇನೆ. | ಅರಣ್ಯ ರಕ್ಷಕ ಹುದ್ದೆಯ ಅಧಿಸೂಚನೆಯ ಕಂಡಿಕೆ (13.8) ರಲ್ಲಿ ಪ್ರವರ್ಗದ ಮೀಸಲಾತಿಯಲ್ಲಿ ಆಯ್ಕೆ ಬಯಸುವ ಅಭ್ಯರ್ಥಿಗಳು ಅರ್ಜಿಯಲ್ಲಿ ಪ್ರವರ್ಗದ ಕಾಲಂ ನ್ನು ಕಡ್ಡಾಯವಾಗಿ ನಮೂದಿಸಬೇಕು. ಈ ಕಾಲಂ ನ್ನು ಭರ್ತಿ ಮಾಡದೇ ಖಾಲಿ ಬಿಟ್ಟಲ್ಲಿ "ಸಾಮಾನ್ಯ ಅರ್ಹತೆ" ಎಂದು ಪರಿಗಣಿಸಲಾಗುವುದು. ಯಾವುದೇ ಹಂತದಲ್ಲಿ ಅಭ್ಯರ್ಥಿ ತಾನು ಹೊಂದಿರುವ ಪ್ರವರ್ಗದ ಕುರಿತು ಮಾಹಿತಿಯನ್ನು ಹೊಸದಾಗಿ ಸೇರ್ಪಡೆ ಮಾಡಲು ಅಥವಾ ಬದಲಾವಣೆ ಮಾಡಲು ಅವಕಾಶವಿರುವುದಿಲ್ಲ ಎಂದು ತಿಳಿಸಿದ್ದು, ಈ ಹಂತದಲ್ಲಿ ಯಾವುದೇ ಬದಲಾವಣೆ ಮಾಡಲು ಅವಕಾಶವಿರುವುದಿಲ್ಲ. |

18/02/22 19/2 13/2

| ಕ್ರ. ಸಂ. | ಅಭ್ಯರ್ಥಿಯ ಹೆಸರು ಮತ್ತು ಲಿಖಿತ ಪರೀಕ್ಷೆಯ ನೋಂದಣಿ ಸಂಖ್ಯೆ | ವೃತ್ತ | 1:1 (ಹುದ್ದೆ:ಅಭ್ಯರ್ಥಿ) ತಾತ್ಕಾಲಿಕ ಆಯ್ಕೆ ಪಟ್ಟಿಯ ಕುರಿತು ಅಭ್ಯರ್ಥಿಯ ಆಕ್ಷೇಪಣೆ | ಅಭ್ಯರ್ಥಿಯ ಆಕ್ಷೇಪಣೆ ಕುರಿತು ಇಲಾಖೆಯ ಷರಾ |
|---|---|---|---|---|
| 16 | ಅರುಣ್ ಕುಮಾರ್ ಎಸ್. ಕೆ. | - | 339 ಅರಣ್ಯ ರಕ್ಷಕ ಹುದ್ದೆಗಳಿಗೆ ಅಧಿಸೂಚನೆಯನ್ನು ಹೊರಡಿಸಲಾಗಿದೆ. ತಾತ್ಕಾಲಿಕ ಆಯ್ಕೆ ಪಟ್ಟಿಯ ಪ್ರಕಾರ ಒಟ್ಟು 312 ಹುದ್ದೆಗಳನ್ನು ಭರ್ತಿ ಮಾಡಲಾಗಿದೆ. ಉಳಿದ 27 ಸೀಟುಗಳ ಆಯ್ಕೆ ಪಟ್ಟಿಯನ್ನು ನಾವು ಯಾವಾಗ ನಿರೀಕ್ಷಿಸಬಹುದು? | 339 ಅರಣ್ಯ ರಕ್ಷಕ ಹುದ್ದೆಗೆ ಅಧಿಸೂಚನೆಯಲ್ಲಿ ಅಧಿಸೂಚಿಸಿರುವ ಮೀಸಲಾತಿ ನಿಯಮಗಳನ್ವಯ ಹಾಗೂ ಅರ್ಹತಾ ಪರೀಕ್ಷೆ ಮತ್ತು ಲಿಖಿತ ಪರೀಕ್ಷೆಯಲ್ಲಿ ಪಡೆದ ಅಂಕಗಳ ಮೆರಿಟ್ ಆಧಾರದ ಮೇಲೆ ಒಟ್ಟು 312 ಅರ್ಹ ಅಭ್ಯರ್ಥಿಗಳು ತಾತ್ಕಾಲಿಕ ಆಯ್ಕೆ ಪಟ್ಟಿಗೆ ಆಯ್ಕೆಯಾಗಿರುತ್ತಾರೆ. |
| 17 | ರಂಜಿತ್ ಕುಮಾರ್ ಸಿ.<br>ನೋಂದಣಿ ಸಂಖ್ಯೆ: 2900076 | ಮಂಗಳೂರು | ನಾನು ಲಿಖಿತ ಪರೀಕ್ಷೆಯಲ್ಲಿ ಅಂಕಗಳನ್ನು 34 ಪಡೆದಿದ್ದೇನೆ ಮತ್ತು ನಾನು PUCನಲ್ಲಿ 89.5% ಪಡೆದಿದ್ದೇನೆ .ಅಂಕಗಳು 62 ನಾನು ಪಡೆದಿರುವ ಒಟ್ಟು . ಮಂಗಳೂರು ವೃತ್ತಕ್ಕೆ .ಆದರೆ ನಾನು ಆಯ್ಕೆಯಾಗಿಲ್ಲ 4802761 ನನ್ನ ಅರ್ಜಿ ಸಂಖ್ಯೆ .ಅರ್ಜಿ ಸಲ್ಲಿಸಿದ್ದೇನೆ. ಪಾಸ್‌ವರ್ಡ್ 26/05/1999. ನಾನು ST ವರ್ಗದಲ್ಲಿದ್ದೇನೆ . .ಫಲಿತಾಂಶಗಳ ಬಗ್ಗೆ ದಯವಿಟ್ಟು ಸ್ಪಷ್ಟಪಡಿಸಿ | ಅರಣ್ಯ ರಕ್ಷಕ ಹುದ್ದೆಯ ನೇರ ನೇಮಕಾತಿ ಅಧಿಸೂಚನೆಯಲ್ಲಿ ಮಂಗಳೂರು ವೃತ್ತಕ್ಕೆ ಅಧಿಸೂಚಿಸಿರುವ ಹುದ್ದೆಗಳಲ್ಲಿ ಪರಿಶಿಷ್ಟ ಪಂಗಡ ಪ್ರವರ್ಗದಲ್ಲಿ ಅಂಗವಿಕಲ (ಕುಷ್ಟ ರೋಗದಿಂದ ಗುಣಮುಖ ಹೊಂದಿದ ಅಭ್ಯರ್ಥಿ) ಮೀಸಲಾತಿಯಡಿ 01 ಹುದ್ದೆಯನ್ನು ಹಾಗೂ ಪರಿಶಿಷ್ಟ ಪಂಗಡಕ್ಕೆ ಸೇರಿದ ಬುಡಕಟ್ಟು ಜನಾಂಗದ ಅಭ್ಯರ್ಥಿಗಳಿಗೆ 02 ಹುದ್ದೆಗಳನ್ನು ಮೀಸಲಿರಿಸಲಾಗಿರುತ್ತದೆ.<br><br>ಸದರಿ ಅಭ್ಯರ್ಥಿಯು ಪರಿಶಿಷ್ಟ ಪಂಗಡ ಪ್ರವರ್ಗದಡಿ ಅರ್ಜಿ ಸಲ್ಲಿಸಿದ್ದು, ಅಭ್ಯರ್ಥಿಯು ಅರ್ಹತಾ ವಿದ್ಯಾರ್ಹತೆಯಲ್ಲಿ ಪಡೆದಿರುವ ಅಂಕಗಳ ಹಾಗೂ ಲಿಖಿತ ಪರೀಕ್ಷೆಯಲ್ಲಿ ಪಡೆದಿರುವ ಅಂಕಗಳ ಶೇಕಡವಾರು ಅಂಕಗಳನ್ನು ಪರಿಶೀಲಿಸಲಾಗಿ, ಅಧಿಸೂಚನೆಯಲ್ಲಿ ಅಧಿಸೂಚಿಸಿದ ಪ್ರವರ್ಗವಾರು ಹಾಗೂ ಮೆರಿಟ್ ಮತ್ತು ಮೀಸಲಾತಿ ನಿಯಮಗಳನ್ವಯ ಅರಣ್ಯ ರಕ್ಷಕ 1:1 (ಹುದ್ದೆ:ಅಭ್ಯರ್ಥಿ) ತಾತ್ಕಾಲಿಕ ಆಯ್ಕೆ ಪಟ್ಟಿಗೆ ಪರಿಗಣಿಸದೇ ಇರುವುದು ನಿಯಮಾನುಸಾರ ಸರಿ ಇರುತ್ತದೆ. |
| 18 | ಸಲ್ಮಾನ್ ಖಾಂಜಾದೆ<br>ನೋಂದಣಿ ಸಂಖ್ಯೆ: 2400008 | ಚಾಮರಾಜನಗರ | ಅರಣ್ಯ ರಕ್ಷಕ ಹುದ್ದೆಯ ಲಿಖಿತ ಪರೀಕ್ಷೆಯಲ್ಲಿ ನನಗಿಂತ ಕಡಿಮೆ ಅಂಕ ಗಳಿಸಿದ ಅಭ್ಯರ್ಥಿಗಳ ಹೆಸರು ಆಯ್ಕೆ ಪಟ್ಟಿಯಲ್ಲಿ ಇರುತ್ತದೆ. ಆದರೆ, ಆಯ್ಕೆ ಪಟ್ಟಿಯಲ್ಲಿರುವ ಅಭ್ಯರ್ಥಿಗಳಿಗಿಂತ ಹೆಚ್ಚಿನ ಅಂಕಗಳನ್ನು ಗಳಿಸಿದರು ಕೂಡ ಈ ಪಟ್ಟಿಯಲ್ಲಿನನ್ನ ಹೆಸರು ಬಿಟ್ಟುಹೋಗಿರುತ್ತದೆ. | ಅರಣ್ಯ ರಕ್ಷಕ ಹುದ್ದೆಯ ನೇರ ನೇಮಕಾತಿ ಅಧಿಸೂಚನೆಯಲ್ಲಿ ಚಾಮರಾಜನಗರ ವೃತ್ತಕ್ಕೆ ಅಧಿಸೂಚಿಸಿರುವ ಹುದ್ದೆಗಳಲ್ಲಿ 2ಬಿ ಪ್ರವರ್ಗ ಇತರೆ ಮೀಸಲಾತಿಯಲ್ಲಿ 01 ಹುದ್ದೆ ಹಾಗೂ 2ಬಿ ಪ್ರವರ್ಗ - ಅಂಗವಿಕಲ (ಕುಷ್ಟ ರೋಗದಿಂದ ಗುಣಮುಖ ಹೊಂದಿದ ಅಭ್ಯರ್ಥಿ) ಮೀಸಲಾತಿಯಡಿ 01 ಹುದ್ದೆಯನ್ನು ಮೀಸಲಿರಿಸಲಾಗಿರುತ್ತದೆ. |

18/02/22

19/2

| ಕ್ರ. ಸಂ. | ಅಭ್ಯರ್ಥಿಯ ಹೆಸರು ಮತ್ತು ಲಿಖಿತ ಪರೀಕ್ಷೆಯ ನೋಂದಣಿ ಸಂಖ್ಯೆ | ವೃತ್ತ | 1:1 (ಹುದ್ದೆ:ಅಭ್ಯರ್ಥಿ) ತಾತ್ಕಾಲಿಕ ಆಯ್ಕೆ ಪಟ್ಟಿಯ ಕುರಿತು ಅಭ್ಯರ್ಥಿಯ ಆಕ್ಷೇಪಣೆ | ಅಭ್ಯರ್ಥಿಯ ಆಕ್ಷೇಪಣೆ ಕುರಿತು ಇಲಾಖೆಯ ಷರಾ |
|---|---|---|---|---|
| | | | | ಸದರಿ ಅಭ್ಯರ್ಥಿಯು 2ಬಿ ಪ್ರವರ್ಗದಡಿ ಅರ್ಜಿ ಸಲ್ಲಿಸಿದ್ದು, ಅಭ್ಯರ್ಥಿಯು ಅರ್ಹತಾ ವಿದ್ಯಾರ್ಹತೆಯಲ್ಲಿ ಪಡೆದಿರುವ ಅಂಕಗಳ ಹಾಗೂ ಲಿಖಿತ ಪರೀಕ್ಷೆಯಲ್ಲಿ ಪಡೆದಿರುವ ಅಂಕಗಳ ಶೇಕಡವಾರು ಅಂಕಗಳನ್ನು ಪರಿಶೀಲಿಸಲಾಗಿ, ಅಧಿಸೂಚನೆಯಲ್ಲಿ ಅಧಿಸೂಚಿಸಿದ ಪ್ರವರ್ಗವಾರು ಹಾಗೂ ಮೆರಿಟ್ ಮತ್ತು ಮೀಸಲಾತಿ ನಿಯಮಗಳನ್ವಯ ಅರಣ್ಯ ರಕ್ಷಕ 1:1 (ಹುದ್ದೆ:ಅಭ್ಯರ್ಥಿ) ತಾತ್ಕಾಲಿಕ ಆಯ್ಕೆ ಪಟ್ಟಿಗೆ ಪರಿಗಣಿಸದೇ ಇರುವುದು ನಿಯಮಾನುಸಾರ ಸರಿ ಇರುತ್ತದೆ. |
| 19 | ತೇಜು ರಾಥೋಡ್<br>ನೋಂದಣಿ ಸಂಖ್ಯೆ: 2800488 | ಚಿಕ್ಕಮಗಳೂರು | ಅರ್ಜಿ ಸಂಖ್ಯೆ: 4707612 ಅಭ್ಯರ್ಥಿ ಸಂಖ್ಯೆ: Galeppa Y Kolar ಇವರು 1:20 ಪಟ್ಟಿಯಲ್ಲಿ SC – Others ಕೋಟಾದಡಿ ಆಯ್ಕೆಯಾಗಿರುತ್ತಾರೆ. ಆದರೆ, 1:1 ತಾತ್ಕಾಲಿಕ ಆಯ್ಕೆ ಪಟ್ಟಿಯಲ್ಲಿ ಕುಷ್ಟರೋಗ GM ನಲ್ಲಿ ಆಯ್ಕೆಯಾಗಿದ್ದಾರೆ. | ಗಾಳೆಪ್ಪ ಕೋಲಾರ, ನೋಂದಣಿ ಸಂಖ್ಯೆ: 2800875 ಇವರು ಪರಿಶಿಷ್ಟ ಜಾತಿ ಪ್ರವರ್ಗದಡಿ ಕನ್ನಡ ಮಾಧ್ಯಮ ಮತ್ತು ಅಂಗವಿಕಲ (ಕುಷ್ಠ ರೋಗದಿಂದ ಗುಣಮುಖ ಹೊಂದಿದ ಅಭ್ಯರ್ಥಿ) ಕೋಟಾದಡಿ ಮೀಸಲಾತಿಯನ್ನು ಕೋರಿಅರ್ಜಿಯನ್ನು ಸಲ್ಲಿಸಿರುತ್ತಾರೆ. ಸದರಿಯವರು ನೇಮಕಾತಿ ಅಧಿಸೂಚನೆಯಲ್ಲಿ ಅಧಿಸೂಚಿಸಿರುವ ವಿದ್ಯಾರ್ಹತೆಯಲ್ಲಿ ಪಡೆದ ಅಂಕಗಳ ಮೆರಿಟ್ ಹಾಗೂ ಮೀಸಲಾತಿ ಆಧಾರದ ಮೇಲೆ 1:20 (ಹುದ್ದೆ:ಅಭ್ಯರ್ಥಿ) ಆಯ್ಕೆ ಪಟ್ಟಿಯಲ್ಲಿ ಪರಿಶಿಷ್ಟ ಜಾತಿ ಪ್ರವರ್ಗದ ಇತರೆ (SC – Others)ಕೋಟಾದಡಿ ಆಯ್ಕೆಯಾಗಿರುತ್ತಾರೆ.<br><br>ಸದರಿಯವರ ಅರ್ಹತಾ ವಿದ್ಯಾರ್ಹತೆಯಲ್ಲಿ ಪಡೆದ ಅಂಕಗಳ ಮತ್ತು ಇಲಾಖೆಯು ನಡೆಸಿದ ಲಿಖಿತ ಪರೀಕ್ಷೆಯಲ್ಲಿ ಪಡೆದ ಒಟ್ಟು ಅಂಕಗಳ ಮೆರಿಟ್ ಆಧಾರದಲ್ಲಿ ಮತ್ತು ಅಧಿಸೂಚನೆಯಲ್ಲಿ ಅಧಿಸೂಚಿಸಿದ ಮೀಸಲಾತಿಯನ್ವಯ ಸಾಮಾನ್ಯ ಪ್ರವರ್ಗ – ಅಂಗವಿಕಲ (ಕುಷ್ಠ ರೋಗದಿಂದ ಗುಣಮುಖ ಹೊಂದಿದ ಅಭ್ಯರ್ಥಿ) ಕೋಟಾದಡಿ ಅರ್ಹರಾಗಿರುವುದರಿಂದ 1:1 (ಹುದ್ದೆ:ಅಭ್ಯರ್ಥಿ) ತಾತ್ಕಾಲಿಕ ಆಯ್ಕೆ ಪಟ್ಟಿಯಲ್ಲಿ ಆಯ್ಕೆ ಮಾಡಿರುವುದು ನಿಯಮಾನುಸಾರ ಸರಿ ಇರುತ್ತದೆ. |
| 20 | ಅಂಬಾರಾಯ<br>ನೋಂದಣಿ ಸಂಖ್ಯೆ: 2300159 | ಬೆಂಗಳೂರು | ನಾನು ದಿನಾಂಕ: 12.12.2021 ರಂದು ಕೀ ಉತ್ತರಕ್ಕೆ ಅಂತಿಮ ಆಕ್ಷೇಪಣೆಯನ್ನು ಸಲ್ಲಿಸಿರುತ್ತೇನೆ. ಆದರೆ, ಇಲಾಖೆಯು ಇದನ್ನು ಪರಿಗಣಿಸದೆ, ತಾತ್ಕಾಲಿಕ ಆಯ್ಕೆ | ಅಂಬಾರಾಯ ಇವರು ಪ್ರಶ್ನೆ ಪತ್ರಿಕೆ ವರ್ಷನ್ ಕೋಡ್ "C" ರ ಪ್ರಶ್ನೆ ಸಂಖ್ಯೆ: 75 ಕ್ಕೆ ಸಂಬಂಧಿಸಿದಂತೆ ಆಕ್ಷೇಪಣೆಯನ್ನು ಸಲ್ಲಿಸಿರುತ್ತಾರೆ. ಸದರಿ ಆಕ್ಷೇಪಣೆಯನ್ನು ಒಳಗೊಂಡಂತೆ ಈ |

18/02/22 19/2 18/2

| ಕ್ರ. ಸಂ. | ಅಭ್ಯರ್ಥಿಯ ಹೆಸರು ಮತ್ತು ಲಿಖಿತ ಪರೀಕ್ಷೆಯ ನೋಂದಣಿ ಸಂಖ್ಯೆ | ವೃತ್ತ | 1:1 (ಹುದ್ದೆ:ಅಭ್ಯರ್ಥಿ) ತಾತ್ಕಾಲಿಕ ಆಯ್ಕೆ ಪಟ್ಟಿಯ ಕುರಿತು ಅಭ್ಯರ್ಥಿಯ ಆಕ್ಷೇಪಣೆ | ಅಭ್ಯರ್ಥಿಯ ಆಕ್ಷೇಪಣೆ ಕುರಿತು ಇಲಾಖೆಯ ಪರಾ |
|---|---|---|---|---|
| | | | ಪಟ್ಟಿಯನ್ನು ಪ್ರಕಟಿಸಿದೆ. ಇಲಾಖೆಯು ಸರಿಯಾದ ಉತ್ತರವನ್ನು ಕೊಡದಿದ್ದ ಕಾರಣದಿಂದ ಬೆಂಗಳೂರು ವೃತ್ತದಲ್ಲಿ ಪರಿಶಿಷ್ಟ ಪಂಗಡ ಪ್ರವರ್ಗದ ಹುದ್ದೆಗೆ 0.33 ಇಂದ ವಂಚಿತನಾಗಿದ್ದೇನೆ. ಇಲಾಖೆಯು ನನ್ನ ಅರ್ಜಿಯನ್ನು ಪರಿಶೀಲಿಸಿ, ಸರಿಯಾದ ಕೀ ಉತ್ತರವನ್ನು ನೀಡಿ, ನನ್ನನ್ನು ಅರಣ್ಯ ರಕ್ಷಕ ಹುದ್ದೆಗೆ ಆಯ್ಕೆ ಮಾಡಬೇಕಾಗಿ ಕೋರುತ್ತೇನೆ. | ಕಛೇರಿ ಪ್ರಕಟಣೆ ದಿನಾಂಕ: 24.12.2021 ರಲ್ಲಿ ಅರಣ್ಯ ರಕ್ಷಕ ಹುದ್ದೆಯ ಲಿಖಿತ ಪರೀಕ್ಷೆಗೆ ಸಂಬಂಧಿಸಿದಂತೆ ಕೀ ಉತ್ತರಗಳ ಕುರಿತು ಸ್ವೀಕೃತವಾದ ಎಲ್ಲಾ ಆಕ್ಷೇಪಣೆಗಳನ್ನು ಕೂಲಂಕಶವಾಗಿ ಪರಿಶೀಲಿಸಿ, ಸಂಬಂಧಿಸಿದ ವಿಷಯಗಳ ಪರಿಣಿತರೊಂದಿಗೆ ಪ್ರಶ್ನಾವಾರು ಚರ್ಚಿಸಿ, ಪರಿಷ್ಕೃತ ಕೀ ಉತ್ತರಗಳನ್ನು ಅಂತಿಮಗೊಳಿಸಿ ಪ್ರಕಟಿಸಲಾಗಿರುತ್ತದೆ. |
| 21 | ರಕ್ಷಿತ್ ವೈ. ಪಿ.<br>ನೋಂದಣಿ ಸಂಖ್ಯೆ: 2900098 | ಮಂಗಳೂರು | ಮಂಗಳೂರು ವಿಭಾಗದ ಅರಣ್ಯ ರಕ್ಷಕ ಹುದ್ದೆಗೆ ಅರ್ಜಿಯನ್ನು ಸಲ್ಲಿಸಿದ್ದು, ಪಿಯುಸಿ ಹಾಗೂ ಅರಣ್ಯ ರಕ್ಷಕ ಹುದ್ದೆಯ ಲಿಖಿತ ಪರೀಕ್ಷೆಯ ಪಡೆದ ಒಟ್ಟು ಅಂಕಗಳು 68 ಆಗಿರುತ್ತದೆ. ಮಂಗಳೂರು ವೃತ್ತದ ಅರಣ್ಯ ರಕ್ಷಕ ಹುದ್ದೆಯಲ್ಲಿ ಪರಿಶಿಷ್ಟ ಪಂಗಡ (ಅಂಗವಿಕಲ) 1 ಹುದ್ದೆ ಲಭ್ಯವಿದ್ದು, ಯಾವುದೇ ಅಭ್ಯರ್ಥಿ ಲಭ್ಯವಿಲ್ಲದ ಕಾರಣ ಪರಿಶಿಷ್ಟ ಪಂಗಡ (ಅಂಗವಿಕಲ) 1 ಹುದ್ದೆ ಬ್ಯಾಕ್ ಲಾಗ್ ಉಳಿಸಲಾಗಿದೆ. ಈ ಹುದ್ದೆಯನ್ನು ಪರಿಶಿಷ್ಟ ಪಂಗಡ ಅಭ್ಯರ್ಥಿಗೆ ನೀಡಬೇಕೆಂದು ಕೋರುತ್ತೇನೆ. | ಸರ್ಕಾರದ ಸುತ್ತೋಲೆ ಸಂಖ್ಯೆ: ಸಿಆಸುಇ 21 ಸೇನೆನಿ 2021 ದಿನಾಂಕ: 18.02.2021 ರಕಂಡಿಕೆ (3) ರಲ್ಲಿ ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 149 ಎಸ್‌ಆರ್ ಆರ್ 2020 ದಿನಾಂಕ: 25.09.2020 ರ ಅನುಸಾರ ಯಾವುದೇ ಹುದ್ದೆಯ ನೇರ ನೇಮಕಾತಿ ಪ್ರಕ್ರಿಯೆಯಲ್ಲಿ ಒಂದು ವೇಳೆ ಅಧಿಸೂಚಿಸಿದ ಅಂಗವಿಕಲತೆ ಹೊಂದಿರುವ ಅಭ್ಯರ್ಥಿಗಳು ಲಭ್ಯವಿಲ್ಲದೇ ಇದ್ದಲ್ಲಿ, ಅಂತಹ ರಿಕ್ತ ಸ್ಥಾನವನ್ನು ಮುಂದಿನ ನೇಮಕಾತಿಗೆ ಮುಂದಕ್ಕೊಯ್ಯತಕ್ಕದ್ದು ಎಂದು ಸೂಚಿಸಲಾಗಿರುತ್ತದೆ. ಅದರಂತೆ, ಪ್ರಸ್ತುತ ಮಂಗಳೂರು ವೃತ್ತದಲ್ಲಿ ಪರಿಶಿಷ್ಟ ಪಂಗಡ ಅಂಗವಿಕಲ ಬ್ಯಾಕ್ ಲಾಗ್ ಹುದ್ದೆಯನ್ನು ಮುಂದಿನ ನೇರ ನೇಮಕಾತಿ ಅಧಿಸೂಚನೆಯಲ್ಲಿ ಅಧಿಸೂಚಿಸಲಾಗುವುದು. |
| 22 | ವಿದ್ಯಾರ್ಥಿಗಳು<br>ನರಸಿಂಹರಾಜಪುರ ತಾಲ್ಲೂಕು<br>ಚಿಕ್ಕಮಗಳೂರು | - | ಅರಣ್ಯ ರಕ್ಷಕ ಹುದ್ದೆಯ ನೇಮಕಾತಿಯಲ್ಲಿ ಪಿಯುಸಿ ಅಂಕಗಳನ್ನು ಪರಿಗಣಿಸದೆ, ಸಿಇಟಿ ಅಂಕಗಳನ್ನು ಪರಿಗಣಿಸಿ, ಮೆರಿಟ್ ಆಧಾರದ ಮೇಲೆ ಅಭ್ಯರ್ಥಿಗಳನ್ನು ಆಯ್ಕೆ ಮಾಡಲು ಕೋರಲಾಗಿದೆ. | ಅರಣ್ಯ ರಕ್ಷಕ ಹುದ್ದೆಗೆ ಸಂಬಂಧಿಸಿದಂತೆ ಪ್ರಸ್ತುತ ಚಾಲ್ತಿಯಲ್ಲಿರುವ ವೃಂದ ಮತ್ತು ನೇಮಕಾತಿ ನಿಯಮಗಳು ಅಧಿಸೂಚನೆ ಸಂಖ್ಯೆ: FEE 203 FEG 2015, Bengaluru dated: 06.08.2019 ರ ಕ್ರಮ ಸಂಖ್ಯೆ: 14 ರಲ್ಲಿ ಅರಣ್ಯ ರಕ್ಷಕ ವೃಂದಕ್ಕೆ ಸಂಬಂಧಿಸಿದ ನೇಮಕಾತಿ ನಿಯಮಗಳಲ್ಲಿ ತಿಳಿಸಿರುವಂತೆ ನೇಮಕಾತಿ ಪ್ರಕ್ರಿಯೆಯನ್ನು ನಡೆಸಲಾಗುತ್ತಿದೆ. |
| 23 | ವಂದನಾ ಕೆ. ಎಸ್. | - | ಅರಣ್ಯ ರಕ್ಷಕ ಹುದ್ದೆಗೆಆಯ್ಕೆ ಮಾಡಿದ ಪಟ್ಟಿಯಲ್ಲಿ ಯಾವುದೇ ಮಹಿಳಾ ಅಭ್ಯರ್ಥಿಗಳ ಹೆಸರಿರುವುದಿಲ್ಲ. | ಅಧಿಸೂಚನೆಯಲ್ಲಿ ಅಧಿಸೂಚಿಸಿರುವ ಹುದ್ದೆಗಳಿಗೆ ಅರ್ಹತಾ ವಿದ್ಯಾರ್ಹತೆಯಲ್ಲಿ ಪಡೆದ ಒಟ್ಟು ಅಂಕಗಳ ಮತ್ತು ಇಲಾಖೆಯು ನಡೆಸಿದ ಲಿಖಿತ ಪರೀಕ್ಷೆಯಲ್ಲಿ ಪಡೆದ ಒಟ್ಟು ಅಂಕಗಳ ಮೆರಿಟ್ ಆಧಾರದಲ್ಲಿ ಮತ್ತು ಅಧಿಸೂಚನೆಯಲ್ಲಿ ಅಧಿಸೂಚಿಸಿದ ಮೀಸಲಾತಿಯನ್ವಯ |

18/02/22

| ಕ್ರ. ಸಂ. | ಅಭ್ಯರ್ಥಿಯ ಹೆಸರು ಮತ್ತು ಲಿಖಿತ ಪರೀಕ್ಷೆಯ ನೋಂದಣಿ ಸಂಖ್ಯೆ | ವೃತ್ತ | 1:1 (ಹುದ್ದೆ:ಅಭ್ಯರ್ಥಿ) ತಾತ್ಕಾಲಿಕ ಆಯ್ಕೆ ಪಟ್ಟಿಯ ಕುರಿತು ಅಭ್ಯರ್ಥಿಯ ಆಕ್ಷೇಪಣೆ | ಅಭ್ಯರ್ಥಿಯ ಆಕ್ಷೇಪಣೆ ಕುರಿತು ಇಲಾಖೆಯ ಷರಾ |
|---|---|---|---|---|
| | | | | ಅಭ್ಯರ್ಥಿಗಳನ್ನು 1:1 (ಹುದ್ದೆ:ಅಭ್ಯರ್ಥಿ) ತಾತ್ಕಾಲಿಕ ಆಯ್ಕೆ ಪಟ್ಟಿಯಲ್ಲಿ ಆಯ್ಕೆ ಮಾಡಲಾಗಿದೆ. |
| 24 | ಮುತ್ತುರಾಜ ತಳವಾರ<br>ನೋಂದಣಿ ಸಂಖ್ಯೆ: 2600039 | ಧಾರವಾಡ | ಅರಣ್ಯ ರಕ್ಷಕ ಹುದ್ದೆಯ ಆಯ್ಕೆ ಪಟ್ಟಿಯಲ್ಲಿ ನನ್ನ ಹೆಸರು ಧಾರವಾಡ ವೃತ್ತದಲ್ಲಿ 1:20 ರ ಪಟ್ಟಿಯಲ್ಲಿರುತ್ತದೆ. ಪ್ರಸ್ತುತ ಪ್ರಕಟಿಸಿರುವ 1:1 ತಾತ್ಕಾಲಿಕ ಆಯ್ಕೆ ಪಟ್ಟಿಯಲ್ಲಿ ನನ್ನ ಹೆಸರನ್ನು ಪರಿಗಣಿಸದೆ, ಜಿ.ಎಂ. ರೂರಲ್ ಮೀಸಲು ಅಡಿಯಲ್ಲಿ ಅಪ್ಲಿಕೇಶನ್ ಐಡಿ-4504272 ನ್ನು ಪರಿಗಣಿಸಿರುತ್ತೀರಿ. | ಅರ್ಜಿ ಸಂಖ್ಯೆ: 4504272 ಇವರು 2ಎ ಪ್ರವರ್ಗದಡಿ ಕನ್ನಡ ಮಾಧ್ಯಮ ಮತ್ತು ಗ್ರಾಮೀಣ ಅಭ್ಯರ್ಥಿ ಕೋಟಾದಡಿ ಮೀಸಲಾತಿಯನ್ನು ಕೋರಿಅರ್ಜಿಯನ್ನು ಸಲ್ಲಿಸಿರುತ್ತಾರೆ. ಸದರಿಯವರು ನೇಮಕಾತಿ ಅಧಿಸೂಚನೆಯಲ್ಲಿ ಅಧಿಸೂಚಿಸಿರುವ ವಿದ್ಯಾರ್ಹತೆಯಲ್ಲಿ ಪಡೆದ ಅಂಕಗಳ ಮೆರಿಟ್ ಹಾಗೂ ಮೀಸಲಾತಿ ಆಧಾರದ ಮೇಲೆ 1:20 (ಹುದ್ದೆ:ಅಭ್ಯರ್ಥಿ) ಆಯ್ಕೆ ಪಟ್ಟಿಯಲ್ಲಿ ಸಾಮಾನ್ಯ ಪ್ರವರ್ಗದ ಗ್ರಾಮೀಣ ಅಭ್ಯರ್ಥಿ (GM – Rural)ಕೋಟಾದಡಿ ಆಯ್ಕೆಯಾಗಿರುತ್ತಾರೆ.<br><br>ಸದರಿಯವರ ಅರ್ಹತಾ ವಿದ್ಯಾರ್ಹತೆಯಲ್ಲಿ ಪಡೆದ ಅಂಕಗಳ ಮತ್ತು ಇಲಾಖೆಯು ನಡೆಸಿದ ಲಿಖಿತ ಪರೀಕ್ಷೆಯಲ್ಲಿ ಪಡೆದ ಒಟ್ಟು ಅಂಕಗಳ ಮೆರಿಟ್ ಆಧಾರದಲ್ಲಿ ಮತ್ತು ಅಧಿಸೂಚನೆಯಲ್ಲಿ ಅಧಿಸೂಚಿಸಿದ ಮೀಸಲಾತಿಯನ್ವಯ ಸಾಮಾನ್ಯ ಪ್ರವರ್ಗ – ಇತರೆ ಕೋಟಾದಡಿ ಅರ್ಹರಾಗಿರುವುದರಿಂದ 1:1 (ಹುದ್ದೆ:ಅಭ್ಯರ್ಥಿ) ತಾತ್ಕಾಲಿಕ ಆಯ್ಕೆ ಪಟ್ಟಿಯಲ್ಲಿ ಆಯ್ಕೆ ಮಾಡಿರುವುದು ನಿಯಮಾನುಸಾರ ಸರಿ ಇರುತ್ತದೆ. |

18/02/22

18/2

18/2

19/2

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
(ಅರಣ್ಯ ಪಡೆ ಮುಖ್ಯಸ್ಥರು),
ಬೆಂಗಳೂರು-03, ಕರ್ನಾಟಕ